"ಕೋರ್ಟಿಗೆ ಬರಂಗಿಲ್ಲಂದ್ರ ಹೆಂಗ?'' ಸಂಭಾಳಿಸಿಗೆಂಡು ಕೇಳಿದ ರೆಡ್ಡಿ.

ಆತನ ಮಾತಿನಾಗ ಮೊದಲಿದ್ದ ಗತ್ತು ಇರಲಿಲ್ಲ.

"ಬ್ಯಾಡ ಸರ್. ನನ್ನ ಬುಟ್ಬುಡ್ರಿ. ನಾನ್ ಸೀದಾ ಬೇಬಿ ಹತ್ಯಾಕ ಹೋಗಿ, ರೊಕ್ಕ ತಗೊಂಡ್ ಈ ಊರಿಂದ ಹೋಗಿಬುಡ್ತೀನಿ. ರೇಡ್ ಆಗದಂಗಿದ್ದಿದ್ರೆ ಇಷ್ಟೊತ್ತಿಗೆ ಭಾಳ ದೂರ ಹೊಗಿರ್ತಿದ್ದೆ.''

ರೆಡ್ಡಿಯ ಕಣ್ಣಿನ್ಯಾಗ ಕಣ್ಣಿಟ್ಟೇ ಮಾತಾಡ್ತಿದ್ಲು ಪದ್ಮ.

ಒಂದು ಸಲ ಕಣ್ಮುಚ್ಚಿ, ಲಾಸ್ಟ್ ದಮ್ಮು ಉದ್ದಕ ಎಳದು ಸಿಗರೇಟ್ ಬಿಸಾಕಿ, ಮತ್ತೆ ಆಕೀ ಕಡೆ ನೋಡಿದ ರೆಡ್ಡಿ. ಆಕಿ ಹಂಗಾ ನೋಡಾಕತ್ಯಾಳ. ಅತನ ಮ್ಯಾಲಿನ ದೃಷ್ಟಿ ಸರಿಸವಳ್ಳು. ಚೂಪಾದ ಆಕೆಯ ದೃಷ್ಟಿ ತನ್ನ ಖಾಕಿ ಡ್ರಸ್ಸನ್ನ ಉಳ್ಳಾಗಡ್ಡಿಯ ಪದರುಗಳನ್ನು ಬಿಡಿಸಿದಂಗ ಬಿಡಿಸಾಕತ್ಯಾದೇನೋ ಅನ್ನಂಗ ಅನಿಸಾಕತ್ತಿತು ರೆಡ್ಡಿಗೆ. ಆಕೀ ಮಾತು ಯಾಕ ಕೇಳಾಕತ್ಯಾನೋ ಆತಗೇ ಅರ್ಥಾಗವಲ್ತು. ಸ್ವಲ್ಪ ಸುಧಾರಿಸಿಗೆಂಡು ಮಾತಾಡೋ ಹೊತ್ತಿಗೆ ಆತನ ಗಂಟಲಲ್ಲಿನ ಖದರು ಆ ಬೇವಿನಗಿಡದ ಗಾಳ್ಯಾಗ ಸೇರಿಕೆಂಡುಬುಟ್ಟಿತ್ತು.

"ಬೇಬಿ ಕಂಪನಿ ಬಿಟ್ಟು ಓಡೋಗಾಣ ಅಂದ್ಕಂಡಿಯಾ?''

"ಓಡೋಗಾದೇನಿಲ್ಲ. ಬೇಬಿಗೆ ಹೇಳೇ ಹೋಗ್ತೀನಿ.''

"ಎಲ್ಲಿಗೆ ಹೋಗ್ತೀ?''

"ತುರಕಟ್ಟೆಗೆ ಹೋಗ್ತಿನಿ ಸರ್... ನಾಲ್ಕು ದಿನ ಇದ್ದು ಅಲ್ಲಿಂದ ಮತ್ತೆ ಹೋಗಿಬಿಡ್ತೀನಿ.''

"ಅಂದ್ರೆ... ಗೋವಾ ಕಡೆ ಹೋಗುತ್ತ್ಯಾ?''

ಇಲ್ಲ ಅನ್ನುವಂಗ ತಲೆ ಆಡಿಸಿದ್ಲು ಪದ್ಮ.

"ನಿನಗ ಅಪ್ಪ ಅಮ್ಮ ಅದಾರಾ?''

"ಅದಾರ ಸರ್.''

"ಏನ್ ಮಾಡ್ತನ ನಿಮ್ಮಪ್ಪ?''

"ಸಾಲಿ ಮಾಸ್ತರ್ ಸರ್.''

"ಸಾಲಿ ಮಾಸ್ತರಾ?...''

"ಹೌದು ಸರ್... ನಾನಂದ್ರ ಜೀವ ಆತಗ. ನಾನು ಬಿ.ಎಡ್. ಮಾಡಿ ಸಾಲಿ ಟೀಚರ್ ಆಗ್ಬೇಕು ಅಂತ ಆಸೆ ಇಟ್ಕಂಡಿದ್ದ.''

"ಮತ್ತೆ ನಿಮ್ಮಪ್ಪಗ

